ಜಮೀನು ಕಸಕೊಂಡಿಲ್ಲ. ಯಶ್ಟು ಗಿರವಿ ಯಿಟ್ಟಿದ್ರೋ ಅಷ್ಟೇ ಬಂಗಾರ, ಯಷ್ಟು ವತ್ತೆ ಯಿಟ್ಟಿದ್ರೋ ಅಷ್ಟೇ ಜಮೀನು. ಒಂದು ತೊಲ ಹೆಚ್ಗಿಲ್ಲ, ಒಂದಂಗುಲ ಹೆಚ್ಗಿಲ್ಲ. ಬೇಕಾರೆ ಯಾವನನ್ನಾರಾ ಕೇಳಿ. ಆದ್ರೆ ನಂಗೆ ಬರಬೇಕಾದ್ದು ನಾನು ಬಿಟ್ಟಿಲ್ಲ. ಈಗ ಅದೇನು ಅಂತೀರೋ ಅನ್ರಿ'.

'ನಾನೇನು ಅನ್ಲಪಾ? ಅಲ್ನೋಡು ಅತ್ಲಗೆ' ಯಮಧರ್ಮ ಒಂದು ದಿಕ್ಕಿಗೆ ಬೆಟ್ಟು ಮಾಡಿದ. ಜಂಬಂಣ ನೋಡಿದ. ಒಂದು ದೊಡ್ಡ ಕಡಾಯಿ ಇನ್ನೂ ಮರ್ತ್ಯಲೋಕದಿಂದ ಮೇಲೆ ಬರ್ತಾಯಿತ್ತು. ಸುಮಾರು ಒನ್ನಾನ್ನೂರು ಜನಕ್ಕೆ ಸಾಂಬಾರು ಮಾಡಬಹುದು, ಅಷ್ಟು ದೊಡ್ಡದಿತ್ತು. 'ಅದೇನು ಗೊತ್ತಾ' ಅಂದ ಯಮಧರ್ಮ. ಜಂಬಂಣ ನೋಡಿದ, ನೀರು ತುಂಬ್ಕಂಡಿತ್ತು. 'ನಿನ್ನ ಕಾಟ ತಡೀಲಾರದೇ ಅತ್ತ ಜನರ ಕಣ್ಣೀರದು. ನೀನು ಜಪ್ತಿ ಮಾಡಬೇಕಾರೆ ನಿನ್ನ ಕಾಲಿಡ್ಕಂಡು ಬೇಡಿಕೊಂಡ್ರಲ್ಲಾ ಅವ್ರದ್ದು. ಹಂಗೆ ಕಾಡಿದೀಯಾ. ಈಗೇನಂತಿ?'

'ನನ್ನ ಕೆಲಸ ನಾನು ಮಾಡಿದೀನಿ. ಕಾನೂನು ಪ್ರಕಾರ ನಂಗೆ ಬರಬೇಕಾದ್ದು ನಾನು ತಗಂಡಿದೀನಿ. ಸಾಲ ತಗಾ ಬೇಕಾರೆ ಅವರೇನು ಬರಕೊಟ್ಟಿದ್ರೋ ಅದನ್ನು ಮಾತ್ರ ತಗಂಡಿದೀನಿ. ಅಳದು ಬಿಡದು ಅವರ ಕರ್ಮ. ಅವರು ಅಳ್ತಾರೆ ಅಂತಂದು ಕೈ ಬಿಟ್ರೆ ವ್ಯಾಪಾರ ಮಾಡಕ್ಕಾಕ್ಕತೇನು ಹೇಳ್ರಿ. ಹಿಂಗೆ ಅಳರು ಸಾಲ ಕೇಳಕೇ ಬರಬಾರದು'.

ಯಮಧರ್ಮಂಗೆ ತಡೀಲಿಕ್ಕಾಗಲಿಲ್ಲ. ಜನಾನ್ನ ಕಾಡಿದ್ದೂ ಅಲ್ಲದೇ ಇಂಥಾ ಉದ್ಧಟತನದ ಮಾತು? 'ಯಾರದಿರಲೇ ಅಲ್ಲಿ, ಒಲೆ ರೆಡಿ ಮಾಡಿ, ಒಂದಿಷ್ಟಿಷ್ಟೇ ಸುಡತಾ ಹೋಗಿ ಇವನನ್ನ, ನಾಕು ತಿಂಗಳು ಇವನು ಬದುಕಿದಂಗೂ ಇರಬಾರದು, ಸತ್ತಂಗೂ ಇರಬಾರದು, ಹಂಗೆ ನರಳತಿರಬೇಕು'.

ಯಮನ ರೈಟೂಲೆಫ್ಟ್ ಹ್ಯಾಂಡ್ಸೂ ಭಾಳಾ ಹೊತ್ತಿಂದ ಇದನ್ನೇ ಕಾಯ್ತಾ ಇದ್ರು. ಒಂದೇ ಏಟಿಗೆ ಜಂಬಂಣನ ಪಕ್ಕ ಬಂದು ನಿಂತು ಜಂಬಂಣನ ಕಂಕುಳಿಗೆ ಕೈ ಹಾಕಿದ್ರು. ಜಂಬಂಣ ಕೈ ಕೊಸರಿಕೊಂಡು, 'ವನ್ನಿಮ್ಷ ತಡೀರಿ' ಅಂದೋನೇ, ಯಮಧರ್ಮನ ಮುಂದೆ ನಿಂತು, 'ನಂಗೆ ಭಗವಂತನ ಹತ್ರ ಮಾತಾಡಬೇಕು. ಕರೀರಿ ಅವನ್ನ ಅಂದ.'

ಯಮಧರ್ಮ ಸಂಕಟಕ್ಕೆ ಬಿದ್ದ. ಯವತ್ತೂ ಹಿಂಗಾಗಿದ್ದಿಲ್ಲ. ಭೂಲೋಕದ ಬಡಪಾಯಿಗಳು ತಾನು ಹೇಳಿದ್ದನ್ನ ವಪ್ಗಂಡು ಹೋಗ್ತಾಯಿದ್ರು. ಈಗ ಇವನು ಯಾವನೋ ಜಂಬಣ್ಣ ಅಂತೆ ಭಗಂವಂತಂಗೇ ಅಪೀಲ್ ಮಾಡಬೇಕೂ ಅಂತಿದಾನೆ. ಇಲ್ಲಾದ್ರೇನೂ, ಭೂಲೋಕದಲ್ಲಿ ಆದ್ರೇನು, ರೂಲ್ಸೂ ಅಂದ್ರೆ ರೂಲ್ಸು. ಇಲ್ಲ ಅನ್ನಂಗಿಲ್ಲ. ಯಮಧರ್ಮ ಸರಿ ತಗ ಅಂತಿದ್ದಂಗೇ ಢಣ್ಣಂತ ಭಗವಂತ ಅಲ್ಲಿ ಹಾಜರಾಗಿದ್ದ.

ಬರ್ತಿದ್ದಂಗೇ ಸಿಡಸಿಡಾಂತಿದ್ದ. 'ಏನಪಾ ಯಮರಾಜಾ, ನಿಂದು ವೊಂದೊಂದಲ್ಲಲೇ, ಯೇನಾರಾ ವಂದು ಮಾಡ್ತಾನೇ ಇರ್ತೀಯಾ' ಅಂತಂದ. 'ಯರಡು ಟಿಕೇಟ್ ಅದವೆ, ನಾಟಕಕ್ಕೆ. ಥರ್ಡ್ ಬೆಲ್ ಹೊಡುದ ಮೇಲೆ ಭಗವಂತಂಗೂ ವಳಗೆ ಬಿಡಲ್ಲ ಅಂದಿದಾರೆ, ಅದೇನಿದ್ಯೋ ಬೇಗ ಮುಗ್ಸು.'

ಯಮಧರ್ಮ ಬಾಯಿ ಬಿಡಕೂ ಮದ್ಲೇ ಜಂಬಂಣ ಸಿರ್ ಅಂದ, 'ನೋಡಪಾ ಭಗವಂತಾ, ನನ್ನ ಕೆಲಸ ನಾನು ಮಾಡಿದ್ದಿಕ್ಕೆ ಇವನು ನಾಕು ತಿಂಗಳು ನನ್ನ ಸುಡಬೇಕೂ ಅಂತ ಶಿಕ್ಷೆ ಕೊಟ್ಟದನೆ, ನಾನು ಬದುಕಿದಂಗೂ ಇರಬಾರದಂತೆ, ಸತ್ತಂಗೂ ಇರಬಾರದಂತೆ, ಇದು ನ್ಯಾಯಾನಾ ನೀನೇ ಹೇಳು. ಮಾಡೋ ಕರ್ತವ್ಯ ಮಾಡಿದ್ದಿಕ್ಕೆ ಯಿಂತಾ ಶಿಕ್ಷೇನಾ? ಅದ್ಯಾರೋ ಅತ್ತಿದಾರಂತೆ. ಅದುಕ್ಕೆ ನಾನೇನು ಮಾಡ್ಲಿ. ಅಳೋರ್ನೆಲ್ಲಾ ಯಾಕಳ್ತೀರಾ ಅಂತ ಕೇಳಕ್ಕಾಕ್ಕತ್ತಾ? ನನ್ನ ಕಸುಬು ಯೇನು ಹೇಳ್ತತೋ ಅದನ್ನು ಮಾಡಿದೀನಿ. ನಮ್ಮ ಭೂಲೋಕಾನೇ ಎಷ್ಟೋ ವಾಸಿ. ಕರ್ತವ್ಯಕ್ಕೆ ಒಂದೆಂಟಾಣೆ ಬೆಲೆನಾರಾ ಇದೆ. ಇಲ್ಲಿ ಅದೂ ಇಲ್ಲ'.

ಭಗವಂತಂಗೆ ತಲೆ ಬುಡ ಅರ್ಥ ಆಗಲಿಲ್ಲ. 'ಇವನ್ಯಾರಪಾ?'

'ಜಂಬಣ್ಣ.'

'ಮತ್ತದೇ. ನನ್ನೆಸ್ರು ಜಂಬಂಣ ಅಂತ.'

'ಮತ್ತೆ ಯಮರಾಜ ಹೇಳಿದ್ದೂ ಅದೇ ಅಲ್ಲೇನಪಾ?'

'ಅವನು ಹೇಳಿದ್ದು ಜಂಬಣ್ಣ ಅಂತ. ನನ್ನ ಹೆಸರು ಜಂಬಂಣ ಅಂತ.'

ಯಮಧರ್ಮ ನಡೆದಿದ್ದನ್ನು ವಂದಿಷ್ಟೂ ಬಿಡದಂಗೆ ಹೇಳಿದ. ಭಗವಂತಂಗೆ ಈಗ ವಂದು ಸಿಗರೇಟ್ ಇದ್ದಿದ್ರೆ ಅನ್ನುಸ್ತು. ಟೆನ್ಷನ್ ವಂದಿಷ್ಟಾನಾ ಕಮ್ಮಿಯಾಗಿರದು. 'ನೋಡಪಾ, ಯಮರಾಜಾ, ಭೂಲೋಕದ ರೂಲ್ಸು